**ವಿಷಯ**: ಆಯುಷ್ ಕಾಲೇಜು/ ಕೋರ್ಸ್‌ಗಳನ್ನು ಪ್ರಾರಂಭಿಸಲು ಅಥವಾ ಪ್ರವೇಶ ಮಿತಿ ಹೆಚ್ಚಿಸಲು ಅರ್ಜಿ ಸಲ್ಲಿಕೆ ಮತು ಮುಂದಿನ ಕ್ರಮದ ಬಗ್ಗೆ ಕಾಲನಿಗದಿ (ಕ್ಯಾಲೆಂಡರ್ ಆಫ್ ಈವೆಂಟ್ಸ್) ರಚಿಸಲು ಹಾಗೂ ಈ ಬಗ್ಗೆ ನಿರಾಕ್ಷೇಪಣಾ ಪ್ರಮಾಣ ಪತ್ರ ಒದಗಿಸುವ ಕುರಿತು ಪರಿಶೀಲಿಸಲು ಉನ್ನತ ಮಟ್ಟದ ಸಮಿತಿ ರಚಿಸುವ ಬಗ್ಗೆ

**ಸಂಖ್ಯೆ: ಆಕುಕ 100 ಪಿಟಿಡಿ 2019**

**ಸ್ವೀಕೃತಿ: ಸಭಾ ನಡೆವಳ ದಿನಾಂಕ:12/02/2019**

1) 2019-20ನೇ ಶೈಕ್ಷಣಿಕ ಸಾಲಿಗೆ ಆಯುಷ್ ಮತ್ತು ಫಾರ್ಮಸಿ ಕೋರ್ಸ್‌ಗಳನ್ನು ಹೊಸದಾಗಿ ಪ್ರಾರಂಭಿಸುವ / ಪ್ರವೇಶ ಮಿತಿ ಹೆಚ್ಚಿಸುವ ಕುರಿತು ರಾಜ್ಯ ಸರ್ಕಾರದ ನಿರಾಕ್ಷೇಪಣಾ ಪ್ರಮಾಣ ಪತ್ರ / ಅನುಮತಿ ನೀಡುವ ವಿಧಾನವನ್ನು ಸ್ಟ್ರೀಮ್‌ಲೈನ್‌ಗೊಳಿಸುವ ಕುರಿತು ದಿನಾಂಕ:12/02/2019 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡೆವಳಿಗಳ (ಮೇಲಿನ ಸ್ವೀಕೃತಿ) ಪ್ರತಿಯನ್ನು ಪುಟ ಸಂಖ್ಯೆ 03 ರಿಂದ 01 ರಲ್ಲಿ ದಯಮಾಡಿ ಅವಗಾಹಿಸಲು ಕೋರಿದೆ.

2) ಮೇಲಿನ ಕಂಡಿಕೆಯ ಸಭಾ ನಡೆವಳಿಯಲ್ಲಿ, ಆಯುಷ್/ಫಾರ್ಮಸಿ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಕಾನ್ಸೆಂಟ್ ಆಫ್ ಅಫಿಲಿಯೇಷನ್ ನೀಡುವ ಬಗ್ಗೆ ಅ.ಸ ಪತ್ರ ಹೊರಡಿಸಲು ನಿರ್ಧರಿಸಿದೆ. ದಿನಾಂಕ:13/03/2019 ರಂದು ಪತ್ರ ಹೊರಡಿಸಿದೆ. (ಪುಟ: 05-04)

3) ಮುಂದುವರೆದು, ಸದರಿ ನಡೆವಳಿಯಲ್ಲಿ ಆಯುಷ್ ಕೋರ್ಸ್‌ಗಳನ್ನು ಹೊಸದಾಗಿ ಪ್ರಾರಂಭಿಸಲು ಅಥವಾ ಪ್ರವೇಶ ಮಿತಿ ಹೆಚ್ಚಿಸಲುರಾಜೀವ್ ಗಾಂದಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಕಾನ್ಸೆಂಟ್ ಆಫ್ ಅಫಿಲಿಯೇಷನ್ ಪಡೆದು ಅರ್ಜಿ ಸಲ್ಲಿಸಲು ಮತ್ತು ಸದರಿ ಅರ್ಜಿಗಳ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಸಾರ್ವಜನಿಕ/ಶೈಕ್ಷಣಿಕ ಹಿತದೃಷ್ಟಿಯಿಂದ ಕಾಲನಿಗದಿ (ಕ್ಯಾಲೆಂಡರ್ ಆಫ್ ಈವೆಂಟ್ಸ್) ಮಾಡಲು ಹಾಗೂ ಸದರಿ ಕೋರ್ಸ್‌ಗಳಿಗೆ ರಾಜ್ಯ ಸರ್ಕಾರದಿಂದ ಒದಗಿಸಬೇಕಾದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡುವ/ನೀಡದಿರುವ ಬಗ್ಗೆ ನಿರ್ಧರಿಸಲು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸಲು ನಿರ್ಣಯ ಕೈಗೊಳ್ಳಲಾಗಿದೆ.

4) ಸದರಿ ಸಭಾ ನಡೆವಳಿಯ ನಿರ್ಣಯದಂತೆ ಕ್ಯಾಲೆಂಡರ್ ಆಫ್ ಈವೆಂಟ್ ಹಾಗೂ ಉನ್ನತ ಮಟ್ಟದ ಸಮಿತಿ ರಚಿಸಿ ಆದೇಶ ಹೊರಡಿಸಲು ಆದೇಶದ ಕರಡನ್ನು ತಯಾರಿಸಿ ಪುಟ ಸಂಖ್ಯೆ:08-06ರಲ್ಲಿರಿಸಿ ಅನುಮೋದನೆ ಅಥವಾ ಮುಂದಿನ ಕ್ರಮದ ಬಗ್ಗೆ ಆದೇಶಕ್ಕಾಗಿ ಕೋರಿ ಕಡತ ಸಲ್ಲಿಸಿದೆ.

**ವಿಷಯ**: ಆಯುಷ್ ಕಾಲೇಜು/ ಕೋರ್ಸ್‌ಗಳನ್ನು ಪ್ರಾರಂಭಿಸಲು ಅಥವಾ ಪ್ರವೇಶ ಮಿತಿ ಹೆಚ್ಚಿಸಲು ಅರ್ಜಿ ಸಲ್ಲಿಕೆ ಮತ್ತು ಮುಂದಿನ ಕ್ರಮದ ಬಗ್ಗೆ ಕಾಲನಿಗದಿ (ಕ್ಯಾಲೆಂಡರ್ ಆಫ್ ಈವೆಂಟ್ಸ್) ರಚಿಸಲು ಹಾಗೂ ಈ ಬಗ್ಗೆ ನಿರಾಕ್ಷೇಪಣಾ ಪ್ರಮಾಣ ಪತ್ರ ಒದಗಿಸುವ ಕುರಿತು ಪರಿಶೀಲಿಸಲು ಉನ್ನತ ಮಟ್ಟದ ಸಮಿತಿ ರಚಿಸುವ ಬಗ್ಗೆ

**ಸಂಖ್ಯೆ: ಆಕುಕ 100 ಪಿಟಿಡಿ 2019**

**ವಿಷಯ**: ಆಯುಷ್ ಕಾಲೇಜು/ ಕೋರ್ಸ್‌ಗಳನ್ನು ಪ್ರಾರಂಭಿಸಲು ಅಥವಾ ಪ್ರವೇಶ ಮಿತಿ ಹೆಚ್ಚಿಸಲು ಅರ್ಜಿ ಸಲ್ಲಿಕೆ ಮತ್ತು ಮುಂದಿನ ಕ್ರಮದ ಬಗ್ಗೆ ಕಾಲನಿಗದಿ (ಕ್ಯಾಲೆಂಡರ್ ಆಫ್ ಈವೆಂಟ್ಸ್) ರಚಿಸಲು ಹಾಗೂ ಈ ಬಗ್ಗೆ ನಿರಾಕ್ಷೇಪಣಾ ಪ್ರಮಾಣ ಪತ್ರ ಒದಗಿಸುವ ಕುರಿತು ಪರಿಶೀಲಿಸಲು ಉನ್ನತ ಮಟ್ಟದ ಸಮಿತಿ ರಚಿಸುವ ಬಗ್ಗೆ

**ಸಂಖ್ಯೆ: ಆಕುಕ 100 ಪಿಟಿಡಿ 2019**

**ವಿಷಯ**: ಆಯುಷ್ ಕಾಲೇಜು/ ಕೋರ್ಸ್‌ಗಳನ್ನು ಪ್ರಾರಂಭಿಸಲು ಅಥವಾ ಪ್ರವೇಶ ಮಿತಿ ಹೆಚ್ಚಿಸಲು ಅರ್ಜಿ ಸಲ್ಲಿಕೆ ಮತ್ತು ಮುಂದಿನ ಕ್ರಮದ ಬಗ್ಗೆ ಕಾಲನಿಗದಿ (ಕ್ಯಾಲೆಂಡರ್ ಆಫ್ ಈವೆಂಟ್ಸ್) ರಚಿಸಲು ಹಾಗೂ ಈ ಬಗ್ಗೆ ನಿರಾಕ್ಷೇಪಣಾ ಪ್ರಮಾಣ ಪತ್ರ ಒದಗಿಸುವ ಕುರಿತು ಪರಿಶೀಲಿಸಲು ಉನ್ನತ ಮಟ್ಟದ ಸಮಿತಿ ರಚಿಸುವ ಬಗ್ಗೆ

**ಸಂಖ್ಯೆ: ಆಕುಕ 100 ಪಿಟಿಡಿ 2019**

## ಕರ್ನಾಟಕ ಸರ್ಕಾರದ ನಡೆವಳಿಗಳು

ವಿಷಯ ಆಯುಷ್ ಕಾಲೇಜು/ ಕೋರ್ಸ್‌ಗಳನ್ನು ಪ್ರಾರಂಭಿಸಲು ಅಥವಾ ಪ್ರವೇಶ ಮಿತಿ ಹೆಚ್ಚಿಸಲು ಅರ್ಜಿ ಸಲ್ಲಿಕೆ ಮತ್ತು ಮುಂದಿನ ಕ್ರಮದ ಬಗ್ಗೆ ಕಾಲನಿಗದಿ (Calendar of Events) ಹಾಗೂ ಈ ಬಗ್ಗೆ ನಿರಾಕ್ಷೇಪಣಾ ಪ್ರಮಾಣ ಪತ್ರ ಒದಗಿಸುವ ಕುರಿತು ಪರಿಶೀಲಿಸಲು ಉನ್ನತ ಮಟ್ಟದ ಸಮಿತಿ ರಚಿಸುವ ಬಗ್ಗೆ

ಓದಲಾಗಿದೆ ದಿನಾಂಕ:12/02/2019 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡೆವಳಿ,

*****

**ಪ್ರಸ್ತಾವನೆ:**

ಆಯುಷ್ ಮತ್ತು ಫಾರ್ಮಸಿ ಕೋರ್ಸ್‌ಗಳನ್ನು ಹೊಸದಾಗಿ ಪ್ರಾರಂಭಿಸುವ / ಪ್ರವೇಶ ಮಿತಿ ಹೆಚ್ಚಿಸುವ ಕುರಿತು ರಾಜ್ಯ ಸರ್ಕಾರದ ನಿರಾಕ್ಷೇಪಣಾ ಪ್ರಮಾಣ ಪತ್ರ/ಅನುಮತಿ ನೀಡುವ ವಿಧಾನವನ್ನು ಸ್ಟ್ರೀಮ್‌ಲೈನ್‌ಗೊಳಿಸುವ ಕುರಿತು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:12/02/2019 ರಂದು ಸಭೆ ನಡೆಸಲಾಗಿದೆ. ಸದರಿ ಸಭೆಯಲ್ಲಿ, ಆಯುಷ್/ ಫಾರ್ಮಸಿ ಕೋರ್ಸ್‌ಗಳನ್ನು ಪ್ರಾರಂಭಿಸಲು/ ಪ್ರವೇಶ ಮಿತಿ ಹೆಚ್ಚಿಸಲು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಪ್ರತಿ ಶೈಕ್ಷಣಿಕ ಸಾಲಿನಲ್ಲಿ ಭಾರತ ಸರ್ಕಾರದ ಆಯುಷ್ ಮಂತ್ರಾಲಯ/ಪಿಸಿಐ ನಿಗದಿಪಡಿಸಿರುವ ಕಾಲಮಿತಿ ಮೀರಿದ ಅನಂತರ ಕಾನ್ಸೆಂಟ್ ಆಫ್ ಅಫಿಲಿಯೇಷನ್ ನೀಡುತ್ತಿರುವುದನ್ನು ಗಮನಿಸಿ, ವಿವರವಾಗಿ ಚರ್ಚಿಸಿದೆ. ಸದರಿ ಸಭೆಯ ಮೇಲೆ ಓದಲಾದ ನಡೆವಳಿಯಲ್ಲಿ ಆಯುಷ್ ಕೋರ್ಸ್‌ಗಳನ್ನು ಹೊಸದಾಗಿ ಪ್ರಾರಂಭಿಸಲು ಅಥವಾ ಪ್ರವೇಶ ಮಿತಿ ಹೆಚ್ಚಿಸಲು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಕಾನ್ಸೆಂಟ್ ಆಫ್ ಅಫಿಲಿಯೇಷನ್ ಪಡೆದು ಅರ್ಜಿ ಸಲ್ಲಿಸಲು ಮತ್ತು ಸದರಿ ಅರ್ಜಿಗಳ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಸಾರ್ವಜನಿಕ/ಶೈಕ್ಷಣಿಕ ಹಿತದೃಷ್ಟಿಯಿಂದ ಕಾಲನಿಗದಿ (ಕ್ಯಾಲೆಂಡರ್ ಆಫ್ ಈವೆಂಟ್ಸ್) ಮಾಡಲು ಹಾಗೂ ಸದರಿ ಕೋರ್ಸ್‌ಗಳಿಗೆ ರಾಜ್ಯ ಸರ್ಕಾರದಿಂದ ಒದಗಿಸಬೇಕಾದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡುವ/ನೀಡದಿರುವ ಬಗ್ಗೆ ನಿರ್ಧರಿಸಲು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸಲು ನಿರ್ಣಯಿಸಲಾಗಿದೆ. ಅದರಂತೆ ಈ ಆದೇಶ

**ಸರ್ಕಾರಿ ಆದೇಶ ಸಂಖ್ಯೆ: ಆಕುಕ 100 ಪಿಟಿಡಿ 2019,**
**ಬೆಂಗಳೂರು ದಿನಾಂಕ:23/03/2019**

ಮೇಲೆ ಓದಲಾದ ಪ್ರಸ್ತಾವನೆಯ ಹಿನ್ನೆಲೆಯಲ್ಲಿ, ಸರ್ಕಾರವು, ಆಯುಷ್ ಕೋರ್ಸ್‌ಗಳನ್ನು ಹೊಸದಾಗಿ ಪ್ರಾರಂಭಿಸಲು/ ಪ್ರವೇಶ ಮಿತಿ ಹೆಚ್ಚಿಸಲು ಇಚ್ಛಿಸುವ ಸಂಸ್ಥೆಗಳು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಕಾನ್ಸೆಂಟ್ ಆಫ್ ಅಫಿಲಿಯೇಷನ್ ಪಡೆದು ಅರ್ಜಿ ಸಲ್ಲಿಸಲು ಮತ್ತು ಸದರಿ ಅರ್ಜಿಗಳ ಮೇಲೆ ಕ್ರಮ ಕುರಿತು ಹಾಗೂ ಸದರಿ ಸಂಸ್ಥೆಗಳಿಗೆ ರಾಜ್ಯ ಸರ್ಕಾರದಿಂದ ಒದಗಿಸಬೇಕಾದ ನಿರಾಕ್ಷೇಪಣಾ ಪ್ರಮಾಣ ಪತ್ರ ನೀಡುವ ಬಗ್ಗೆ ನಿರ್ಧರಿಸಿ ಶಿಫಾರಸು ಮಾಡಲು ಈ ಕೆಳಗಿನಂತೆ ಕಾಲನಿಗದಿ ಹಾಗೂ ಉನ್ನತ ಮಟ್ಟದ ಸಮಿತಿಯನ್ನು ರಚನೆ ಮಾಡಿ ಆದೇಶಿಸಿದೆ.

**ಅರ್ಜಿ ಸಲ್ಲಿಕೆ/ ಪ್ರಕ್ರಿಯೆ ಕಾಲನಿಗದಿ (Calendar of Events):**

| ಕ್ರ.ಸಂ. | ವಿವರ | ನಿಗದಿಪಡಿಸಿದ ದಿನಾಂಕ: (ಪ್ರತಿ ವರ್ಷ) | ಷರಾ |
|---|---|---|---|
| 01 | ನಿರಾಕ್ಷೇಪಣಾ ಪ್ರಮಾಣ ಪತ್ರ/ ಅನುಮತಿಗಾಗಿ ಅರ್ಜಿ ಸಲ್ಲಿಸಲು | ಮೇ 01 ರಿಂದ 15ನೇ ತಾರೀಖಿನವರೆಗೆ | ಆಯುಷ್ ಇಲಾಖೆಯ ಹಂತದಲ್ಲಿ |
| 02 | ಸಂಸ್ಥೆಗಳ ಪರಿವೀಕ್ಷಣೆ ಮತ್ತು ಪ್ರಸ್ತಾವನೆ/ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು | ಮೇ 16 ರಿಂದ 31ನೇ ತಾರೀಖಿನವರೆಗೆ | |
| 03 | ಪ್ರಸ್ತಾವನೆ/ವರದಿಯ ಮೇಲೆ ಕ್ರಮಕ್ಕಾಗಿ ಸಮಿತಿಯ ಸಭೆ ಮತ್ತು ಶಿಫಾರಸು ಮಾಡಲು | ಜೂನ್ 01 ರಿಂದ 15ನೇ ತಾರೀಖಿನವರೆಗೆ | ಸರ್ಕಾರದ ಹಂತದಲ್ಲಿ |
| 04 | ಶಿಫಾರಸಿನ ಮೇಲೆ ನಿರಾಕ್ಷೇಪಣಾ ಪ್ರಮಾಣ ಪತ್ರ/ ಅನುಮತಿ ನೀಡಲು | ಜೂನ್ ತಿಂಗಳ 16ನೇ ತಾರೀಖಿನ ಅನಂತರ | |
| **ಸೂಚನೆ**: ಕೊನೆಯ ದಿನಾಂಕದ ಬಳಿಕ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. | | | |

ಆಯುಷ್ ಇಲಾಖೆಯಿಂದ ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆ/ ವರದಿಯನ್ನು ಪರಿಶೀಲಿಸಿ ಸದರಿ ಸಂಸ್ಥೆಗಳಿಗೆ ನಿರಾಕ್ಷೇಪಣಾ ಪ್ರಮಾಣ ಪತ್ರ/ ಅನುಮತಿ ನೀಡುವ ಬಗ್ಗೆ ಶಿಫಾರಸು ಮಾಡಲು ರಚಿಸಿದ **ಉನ್ನತ ಮಟ್ಟದ ಸಮಿತಿ:**

| ಕ್ರ.ಸಂ. | ಹುದ್ದೆ/ಪದನಾಮ | ಸ್ಥಾನ |
|---|---|---|
| 01 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | ಅಧ್ಯಕ್ಷರು |
| 02 | ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು | ಸದಸ್ಯರು |
| 03 | ಆಯುಕ್ತರು, ಆಯುಷ್ ಇಲಾಖೆ | ಸದಸ್ಯರು |
| 04 | ಪ್ರಾಚಾರ್ಯರು,<br>ಸರ್ಕಾರಿ ಆಯುರ್ವೇದ/ಹೋಮಿಯೋಪಥಿ/ಯುನಾನಿ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು<br>ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಮಹಾವಿದ್ಯಾಲಯ, ಮೈಸೂರು<br>(ಆಯಾ ಪದ್ಧತಿಯ ಅರ್ಜಿಗಳಿಗೆ ಸಂಬಂಧಪಟ್ಟಂತೆ) | ಸದಸ್ಯರು |
| 05 | ಜಂಟಿ ನಿರ್ದೇಶಕರು (ವೈ.ಶಿ) ಆಯುಷ್ ಇಲಾಖೆ | ಸದಸ್ಯ ಕಾರ್ಯದರ್ಶಿ |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಬಿ. ಕಮಲಮ್ಮ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
(ಭಾ.ವೈ.ಪ ಮತ್ತು ಸಮನ್ವಯ)

ಇವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ ಪ್ರಕಟಿತ 50 ಪ್ರತಿಗಳನ್ನು ಶಾಖೆಗೆ ಒದಗಿಸಲು

.....3

ಪ್ರತಿ,

1. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು – 09
2. ಆಯುಕ್ತರು, ಆಯುಷ್ ಇಲಾಖೆ, ಧನ್ವಂತರಿ ರಸ್ತೆ, ಬೆಂಗಳೂರು – 09
3. ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು.
4. ಜಂಟಿ ನಿರ್ದೇಶಕರು (ವೈದ್ಯಕೀಯ ಶಿಕ್ಷಣ), ಆಯುಷ್ ಇಲಾಖೆ, ಧನ್ವಂತರಿ ರಸ್ತೆ, ಬೆಂಗಳೂರು – 09
5. ಪ್ರಾಚಾರ್ಯರು, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಧನ್ವಂತರಿ ರಸ್ತೆ, ಬೆಂಗಳೂರು – 09
6. ಪ್ರಾಚಾರ್ಯರು, ಸರ್ಕಾರಿ ಹೋಮಿಯೋಪಥಿ ವೈದ್ಯಕೀಯ ಮಹಾವಿದ್ಯಾಲಯ, ಸಿದ್ಧಯ್ಯ ಪುರಾಣಿಕ ರಸ್ತೆ, ಬಸವೇಶ್ವರ ನಗರ, ಬೆಂಗಳೂರು
7. ಪ್ರಾಚಾರ್ಯರು, ಸರ್ಕಾರಿ ಯುನಾನಿ ವೈದ್ಯಕೀಯ ಮಹಾವಿದ್ಯಾಲಯ, ಸಿದ್ಧಯ್ಯ ಪುರಾಣಿಕ ರಸ್ತೆ, ಬಸವೇಶ್ವರ ನಗರ, ಬೆಂಗಳೂರು
8. ರಾಜ್ಯದ ಎಲ್ಲಾ ಆಯುರ್ವೇದ, ಹೋಮಿಯೋಪಥಿ, ಯುನಾನಿ ಮತ್ತು ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಮಹಾವಿದ್ಯಾಲಯಗಳ ಪ್ರಾಂಶುಪಾಲರಿಗೆ (**ಆಯುಕ್ತರು ಆಯುಷ್ ಇಲಾಖೆ ಇವರ ಮುಖಾಂತರ**)
9. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ
10. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆ.ಕು.ಕ. ಇಲಾಖೆ ಇವರ ಪತ್ರಾಂಕಿ ಆಪ್ತ ಸಹಾಯಕರಿಗೆ
11. ಸರ್ಕಾರದ ಉಪ ಕಾರ್ಯದರ್ಶಿ-1 ಆ.ಕು.ಕ. ಇಲಾಖೆ ಇವರ ಆಪ್ತ ಸಹಾಯಕರಿಗೆ
12. ಸರ್ಕಾರದ ಉಪ ಕಾರ್ಯದರ್ಶಿ-2 ಆ.ಕು.ಕ. ಇಲಾಖೆ ಇವರ ಆಪ್ತ ಸಹಾಯಕರಿಗೆ